5772 (6583) ಶ್ರೀ ಕಿರಣ್ ಕುಮಾರ್ ಕೆ. ಎಸ್. (ಕಳ್ಳಂಬೆಳ್ಳ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರಿಯೂರು ತಾಲ್ಲೂಕಿನ ಧರ್ಮಪುರ ಹೋಬಳಿಯ ಹಳ್ಳೀಕೆರೆ ಗ್ರಾಮದಲ್ಲಿರುವ ಪ್ರಾಥಮಿಕ ಶಾಲೆಯು ನಿರ್ಮಾಣವಾದ ದಿನದಿಂದ ಇಂದಿನವರೆಗೂ ಯಾವ ದುರಸ್ತಿಯನ್ನೂ ಕಾಣದೆ ಶಿಥಿಲಾವಸ್ಥೆಯಲ್ಲಿರುವುದು ನಿಜವೇ;

ಆ) ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿ ಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಆ ಗ್ರಾಮದ ಶಾಲಾ ಕಟ್ಟಡ ನಿರ್ಮಾಣಕ್ಕೆ ಅಥವಾ ದುರಸ್ತಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸದರಿ ಶಾಲೆಯು 1 ರಿಂದ 5ನೇ ತರಗತಿ ಹೊಂದಿದ್ದು, ಎರಡು ಕೊಠಡಿಗಳನ್ನು ಹೊಂದಿರುತ್ತದೆ. ಇದರಲ್ಲಿ ಒಂದು ಕೊಠಡಿಯು ಸುಸ್ಥಿತಿಯಲ್ಲಿದ್ದು, ಇನ್ನೊಂದು ಕೊಠಡಿ ಪೂರ್ಣ ಶಿಥಿಲಾವಸ್ಥೆಯಲ್ಲಿರುತ್ತದೆ. ಸದರಿ ಕೊಠಡಿಯು ದುರಸ್ತಿಗೊಳಿಸಲು ಯೋಗ್ಯವಾಗಿರುವುದಿಲ್ಲ. ಈ ಕೊಠಡಿಯು ಮಾಳಿಗೆ ಕೊಠಡಿಯಾಗಿದ್ದು, ಇದನ್ನು ಕೆಡವಿ ಹೊಸ ಕೊಠಡಿಯನ್ನು ನಿರ್ಮಿಸಬೇಕಾಗಿರುತ್ತದೆ.

ಆ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) 2001–02ನೇ ಸಾಲಿನ ರಾಜ್ಯವಲಯ ಕಾರ್ಯಕ್ರಮದಲ್ಲಿ 10,000 ರೂ.ಗಳನ್ನು ಹಾಗೂ 2001–02ನೇ ಸಾಲಿಗೆ ಎಸ್.ಎಸ್.ಎ. ಅಡಿ 5000 ರೂ.ಗಳನ್ನು ಸದರಿ ಶಾಲೆಯ ದುರಸ್ತಿಗಾಗಿ ಬಿಡುಗಡೆ ಮಾಡಲಾಗಿದೆ. ಶಿಥಿಲಾವಸ್ಥೆಯಲ್ಲಿರುವ ಕೊಠಡಿ ದುರಸ್ತಿಪಡಿಸಲು ಆಗದೆ ಇರುವುದರಿಂದ 2005–06ನೇ ಸಾಲಿನ ಅವಧಿಯಲ್ಲಿ ಸರ್ವಶಿಕ್ಷಾ ಅಭಿಯಾನ ಮತ್ತು ರಾಷ್ಟ್ರೀಯ ಸಮ ವಿಕಾಸ ಯೋಜನೆಯಲ್ಲಿ ಸದರಿ ಶಾಲೆಗೆ ಹೊಸ ಕೊಠಡಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

5773 (6502) ಶ್ರೀ ಕೃಷ್ಣಯ್ಯ ಶೆಟ್ಟಿ ಎಸ್. ಎನ್. (ಮಾಲೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿ 27 ಹಿರಿಯ ನೇತ್ರ ಸಹಾಯಕರ ಸೇವೆಯನ್ನು ಜಿಲ್ಲಾ ಆಸ್ಪತ್ರೆಗೆ ಮಾತ್ರ ಸೀಮಿತಗೊಳಿಸಿರುವುದು ನಿಜವೇ.

ಆ) ಅವರುಗಳ ಸೇವೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ತಲುಪುವಂತೆ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದರೆ, ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು ;

ಇ) ಕ್ರಮ ಕೈಗೊಂಡಿದ್ದರೆ ಎಷ್ಟು ದಿನಗಳಲ್ಲಿ ಇವರ ಸೇವೆಯನ್ನು ಜಿಲ್ಲೆಗೆಲ್ಲಾ ಒದಗಿಸುವುದು.